# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಸ.ಅ/ವಾರ್ಡ್ ಸಮಿತಿ/ಸಭೆ– 7/2020–21 ದಿನಾಂಕ : 31–12–2020

## –: ಸಭಾ ಸೂಚನಾ ಪತ್ರ :–

ಉಲ್ಲೇಖ : 1) ಮಾನ್ಯ ಆಯುಕ್ತರ ಕಛೇರಿಯ ತಿದ್ದುಪಡಿ ಆದೇಶ ಸಂಖ್ಯೆ : ಬಿ12(5)ಪಿಆರ್/35/ 2020–21 ದಿನಾಂಕ : 02–10–2020.

–****–

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಸರ್ವಜ್ಞನಗರ ವಿಭಾಗ, ಮಾರುತಿಸೇವಾನಗರ ಉಪವಿಭಾಗ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ–29 ಕಾಚರಕನಹಳ್ಳಿಯ ಕುವೆಂಪು ಪಾರ್ಕ್ ಪಕ್ಕದಲ್ಲಿರುವ ಪಾಲಿಕೆ ಕಟ್ಟಡದಲ್ಲಿ ದಿನಾಂಕ : 02–01–2021 ಶನಿವಾರ ರಂದು ಬೆಳಿಗ್ಗೆ 10–30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಗೆ ಎಲ್ಲಾ ಸದಸ್ಯರು ಸಕಾಲದಲ್ಲಿ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಲು ಕೋರಿದೆ.

## –: ಸಭಾ ಅಜೆಂಡಾ :–

| | |
|---|---|
| 1 | ವಾರ್ಡಿನ ವಿವಿಧ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ. |
| 2 | ವಾರ್ಡಿನ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ. |
| 3 | ಕಂದಾಯ ಇಲಾಖೆಗೆ ಸಂಬಂಧಿಸಿದ ಬಗ್ಗೆ. |
| 4 | ನೀರು ಸರಬರಾಜು ಮತ್ತು ಒಳಚರಂಡಿಗೆ (BWSSB) ಸಂಬಂಧಿಸಿದ ವಿಷಯಗಳ ಬಗ್ಗೆ. |
| 5 | ವಿದ್ಯುತ್ ಸರಬರಾಜು (Bescom) ಸಂಬಂಧಿಸಿದ ವಿಷಯಗಳ ಬಗ್ಗೆ. |
| 6 | ಉದ್ಯಾನವನ ಮತ್ತು ಬೀದಿ ದೀಪ ನಿರ್ವಹಣೆಯ ಕುರಿತು |
| 7 | Traffic isues and Law and Order issues |
| 8 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ಬಗ್ಗೆ ಚರ್ಚಿಸುವ ಬಗ್ಗೆ. |
| 9 | ಮಾನ್ಯ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು. |

(ನೋಡಲ್ ಅಧಿಕಾರಿ ರವರ ಆದೇಶದ ಮೇರೆಗೆ)

ಸಹಿ/–
ಕಾರ್ಯದರ್ಶಿ ವಾರ್ಡ್ ಸಮಿತಿ–29
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್–29

ಪ್ರತಿಯನ್ನು:–

1. ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್ ರವರು ಸಭೆಯಲ್ಲಿ ಭಾಗವಹಿಸಲು ಕೋರಿದೆ.

2. ಶ್ರೀ ಉತ್ತಪ್ಪ, ಸದಸ್ಯರು (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) ರವರು ಸಭೆಯಲ್ಲಿ ಭಾಗವಹಿಸಲು ಕೋರಿದೆ.

3. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಸಭೆಯಲ್ಲಿ ಭಾಗವಹಿಸಲು ಕೋರಿದೆ.

4. ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳ ಮಾಹಿತಿಗಾಗಿ ಹಾಗೂ ಸಭೆಯಲ್ಲಿ ಭಾಗವಹಿಸಲು ಕೋರಿದೆ.

5. ಕಲ್ಯಾಣಾಧಿಕಾರಿಗಳು, ಪೂರ್ವ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ

6. ಅರಣ್ಯ ಸಂರಕ್ಷಣಾಧಿಕಾರಿಗಳು, ಪೂರ್ವ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ

7. ಸಹಾಯಕ ಕಾರ್ಯಪಾಲಕ ಅಭಿಯಂತರರು, (BWSSB) ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

8. ಸಹಾಯಕ ಕಾರ್ಯಪಾಲಕ ಅಭಿಯಂತರರು, (Bescom) ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ (SWM) (ಸರ್ವಜ್ಞನಗರ), ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

10. ಸಹಾಯಕ ಕಂದಾಯ ಅಧಿಕಾರಿಗಳು, ಹೆಚ್.ಬಿ.ಆರ್ ಲೇಔಟ್ ಉಪವಿಭಾಗ, ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂದಿಯನ್ನು ನಿಯೋಜಿಸಲು ಕೋರಿದೆ.

11. ಪೊಲೀಸ್ ಇನ್ಸ್‌ಫೆಕ್ಟರ್ (ಸಂಚಾರ) ಬಾಣಸವಾಡಿ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

12. ಪೊಲೀಸ್ ಇನ್ಸ್‌ಫೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ ರವರು ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳು ಮತ್ತು ಮೂಲಭೂತ ಸೌಕರ್ಯಗಳು ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ (SWD) ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

15. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೀದಿ ದೀಪಗಳ ವಿಭಾಗ-ಪೂರ್ವ), ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

16. ಆರೋಗ್ಯ ವೈದ್ಯಾಧಿಕಾರಿಗಳು, ಕಾಚರಕನಹಳ್ಳಿ ರವರು ಖುದ್ದಾಗಿ ಹಾಜರಾಗಲು ಕೋರಿದೆ.

17. ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.

Geetha JC
LSP JE
31/12/2020

AE BESCOM
31/12

31/12/2020

**ಕಾರ್ಯದರ್ಶಿ ವಾರ್ಡ್ ಸಮಿತಿ-29**
**ಹಾಗೂ ಸಹಾಯಕ ಅಭಿಯಂತರರು,**
**ವಾರ್ಡ್-29**

Banasawadi Police Station
HC 9080
31/12/2020

BANASAWADI TRAFFIC POLICE STATION
No.
Date. 31/12/2020

Office of Assistant Executive Engineer, B.W.S.S.B, East-2, Subdivision, Bangalore 43
Sl.No:
Date. 31-12-2020
H.R.B.R Layout
Bangalore

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 02-01-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ಪ್ರಸನ್ನಕುಮಾರ್ ಪ್ರವೀಣ್ ಎ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ.ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಸದಸ್ಯರು,
4. ಶ್ರೀ.ರಾಜೇಶ್, ಕಿರಿಯ ಆರೋಗ್ಯ ನಿರೀಕ್ಷಕರು,
5. ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್,
6. **ಶ್ರೀ ಪ್ರಸನ್ನ, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ)**
7. **ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್ (ರಿ)**

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಪುಟ್ಟಸ್ವಾಮಿ, ಸಹಾಯಕ ಅಭಿಯಂತರರು, ಬೆಸ್ಕಾಂ,
2. ಶ್ರೀಮತಿ ಗೀತಾ, ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ,
3. ಶ್ರೀ.ದವಲ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ),
4. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
5. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ,
6. ಡಾ॥ ಶಾಹೀನಾ, ವೈದ್ಯಾಧಿಕಾರಿಗಳು,
7. ಶ್ರೀಮತಿ ರಾಜೇಶ್ವರಿ, ಕಲ್ಯಾಣ ಇಲಾಖೆ,

ಈ ಸಭೆಗೆ ಹಾಜರಾಗಿದ್ದ ಮೇಲ್ಕಂಡ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ಪ್ರಸನ್ನ, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ)** ರವರು ಮಾತನಾಡಿ, ಹೆಚ್.ಬಿ.ಆರ್ ಬಡಾವಣೆಯಲ್ಲಿ ಸಾರ್ವಜನಿಕರು ಕಸವನ್ನು ಹಸಿ ಮತ್ತು ಒಣ ಕಸವಾಗಿ ವಿಂಗಡಿಸದೇ ನೀಡುತ್ತಿರುವುದು ಕಂಡುಬಂದಿರುತ್ತದೆ. ಮತ್ತು ಸದರಿ ಬಡಾವಣೆಯಲ್ಲಿ ಕಸವನ್ನು ಎಸೆದು ಬ್ಲಾಕ್‌ಸ್ಪಾಟ್‌ಗಳಾಗಿ ಮಾರ್ಪಾಡಾಗಿರುತ್ತವೆ ಎಂದು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರು ಕಸವನ್ನು ಕಡ್ಡಾಯವಾಗಿ ಬೇರ್ಪಡಿಸಿ, ಆಟೋಗಳಿಗೆ ನೀಡುವಂತೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಮತ್ತು ಕಸವನ್ನು ಸಾರ್ವಜನಿಕ ಸ್ಥಳಗಳಲ್ಲಿ ಎಸೆಯುವವರಿಗೆ ದಂಡವನ್ನು ವಿಧಿಸಲು ಮಾರ್ಷಲ್‌ಗಳಿಗೆ ಸಭೆಯು ಸರ್ವಾನುಮತದಿಂದ ಆದೇಶಿಸಿತು.

2) **ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್** (ರಿ) ರವರು ಮಾತನಾಡಿ, ಬಿಡಿಎ ಬಡಾವಣೆಗೆ ನೀರು ಸರಬರಾಜು ಮಾಡುತ್ತಿದ್ದು ಸರಬರಾಜು ಆಗುತ್ತಿರುವ ನೀರು ಸಾಕಾಗುತ್ತಿಲ್ಲವೆಂದು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಚರ್ಚಿಸಲಾಗಿ, ಸಭೆಯಲ್ಲಿ ಹಾಜರಿದ್ದ ಜಲಮಂಡಳಿ ಅಭಿಯಂತರರು ಮಾತನಾಡಿ, ವಿದ್ಯುತ್ ನಿಲುಗಡೆಯಿಂದ ನೀರು ಸಂಗ್ರಹಗಾರಕ್ಕೆ ಪೂರ್ಣ ಪ್ರಮಾಣದಲ್ಲಿ ನೀರು ಸರಬರಾಜು ಆಗಿರುವುದಿಲ್ಲ. ಆದ್ದರಿಂದ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಿರುತ್ತದೆ. ನಾಳೆಯಿಂದ ನೀರು ಸರಬರಾಜನ್ನು ಸಮರ್ಪಕವಾಗಿ ಸರಬರಾಜು ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

3) **ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ರವರು ಮಾತನಾಡಿ,** ಸಿಂಡಿಕೇಟ್ ಬ್ಯಾಂಕ್ ಹತ್ತಿರ ನಿರಂತರವಾಗಿ ವಾಹನಗಳು ನಿಲ್ಲಿಸುತ್ತಿದ್ದು, ಇದರಿಂದ ಅನೈತಿಕ ಚಟುವಟಿಕೆಗಳಿಗೆ ಕಾರಣವಾಗಿರುತ್ತದೆ ಎಂದು ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಈ ಬಗ್ಗೆ ಸಂಚಾರಿ ಪೊಲೀಸ್ ಕ್ರಮ ವಹಿಸಿ, ಶಾಶ್ವತವಾಗಿ ನಿಲುಗಡೆ ಮಾಡಿದ್ದ ವಾಹನಗಳನ್ನು ತೆರವುಗೊಳಿಸಿರುತ್ತಾರೆ. ಆದ್ದರಿಂದ ಸಂಚಾರಿ ಪೊಲೀಸರಿಗೆ ಸಭೆಯು ಅಭಿನಂದಿಸಿತು.

4) **ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ರವರು ಮಾತನಾಡಿ,** ಸುಖ್ ಸಾಗರ್ ರಸ್ತೆಯಲ್ಲಿ ರಾತ್ರಿ ಸಮಯದಲ್ಲಿ ಹೆಚ್ಚು ಜನಸಂದಣಿ ಇದ್ದು, ಈ ರಸ್ತೆಯಲ್ಲಿ ದಿನನಿತ್ಯ ಧೂಮಪಾನ ಮಾಡುವುದು ಹಾಗೂ ರಸ್ತೆಯಲ್ಲಿಯೇ ಮದ್ಯಪಾನ ಮಾಡುವ ವಿದೇಶಿ ಪುಂಡ ಪೋಕಿರಿಗಳು ಹೆಚ್ಚಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಕಾನೂನು ಸುವ್ಯವಸ್ಥೆ ಪೊಲೀಸ್ ಅಧಿಕಾರಿಗಳು ಮಾತನಾಡಿ, ಸದರಿ ರಸ್ತೆಗೆ ದೈನಂದಿನ ರಾತ್ರಿ ಪಾಳಿಯ ಗಸ್ತು ವಾಹನಕ್ಕೆ ಹೆಚ್ಚಿನ ನಿಗಾ ಇಡಲು ಮತ್ತು ಗಸ್ತನ್ನು ತೀವ್ರಗೊಳಿಸಲು ಹೊಯ್ಸಳ ವಾಹನಕ್ಕೆ ಸೂಚಿಸಲಾಗುವುದು ಎಂದು ಸಭೆಗೆ ಉತ್ತರಿಸಿದರು. ಮತ್ತು ಸಾರ್ವಜನಿಕರು, ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ, ದೂಮಪಾನ ಮಾಡುವ ಸನ್ನಿವೇಶಗಳನ್ನು ಕಂಡಲ್ಲಿ ಕೂಡಲೇ ಹೊಯ್ಸಳ ವಾಹನಕ್ಕೆ ಅಥವಾ ಹತ್ತಿರದ ಠಾಣೆಗೆ ನಿರ್ಭಯವಾಗಿ ಮಾಹಿತಿಯನ್ನು ನೀಡಲು ಸಭೆಯಲ್ಲಿ ಕೋರಿದರು.

5) **ಮಾನ್ಯ ಅಧ್ಯಕ್ಷರು ಕೋವಿಡ್ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ,** ವೈದ್ಯಾಧಿಕಾರಿಗಳಾದ ಡಾ॥ ಶಾಹೀನಾ ರವರು ಮಾತನಾಡಿ ಪ್ರಸ್ತುತ ವಾರ್ಡ್ ಪ್ರದೇಶದಲ್ಲಿ 616 ಕೋವಿಡ್ ಪ್ರಕರಣಗಳಿದ್ದು, ಈ ಪೈಕಿ 398 ಹೋಮ್ ಐಸೋಲೇಷನ್ ಮುಗಿಸಿ, ಬಿಡುಗಡೆಯಾಗಿರುತ್ತಾರೆ. 175 ಜನ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬಿಡುಗಡೆಗೊಂಡಿರುತ್ತಾರೆ, 20 ಜನ ಮರಣ ಹೊಂದಿರುತ್ತಾರೆ. 23 ಜನ ಸಕ್ರಿಯ ಚಿಕಿತ್ಸೆಯಲ್ಲಿರುತ್ತಾರೆ. ಇತ್ತೀಚಿನ ಬ್ರಿಟನ್ ವೈರಸ್ ಪ್ರಕರಣಗಳಲ್ಲಿ ಒಟ್ಟು 09 ಪ್ರಕರಣಗಳಲ್ಲಿ ಒಟ್ಟು 08 ಪ್ರಕರಣಗಳು ನೆಗಟಿವ್, ಹಾಗೂ 01 ಪ್ರಕರಣ ದೃಢಪಟ್ಟಿರುತ್ತದೆ ಎಂದು ಸಭೆಗೆ ತಿಳಿಸಿ, ಈ ತಿಂಗಳ ಕೊನೆಯಲ್ಲಿ ವ್ಯಾಕ್ಸಿನೇಷನ್

ಬರಲಿದ್ದು, ಅವುಗಳನ್ನು ಸಂಗ್ರಹಿಸಿ ಇಡಲು ಸ್ಥಳದ ಅವಶ್ಯಕತೆ ಇರುತ್ತದೆ ಎಂದು ಸಭೆಗೆ ತಿಳಿಸುತ್ತಾ, ನಮ್ಮ ವೈದ್ಯಕೀಯ ತಂಡ ದಿನನಿತ್ಯ ಶಾಲೆಗಳಿಗೆ ಭೇಟಿ ನೀಡಿ, ಶಿಕ್ಷಕರಿಗೆ ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆಗಳನ್ನು ಕೈಗೊಳ್ಳಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

Prasanna Kumar A
ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

<u>ಪ್ರತಿಯನ್ನು</u>

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ.
6) ಕಛೇರಿ ಕಡತಕ್ಕೆ.

8/1/21

MR 8/1/2021